ವಿಜಯ ಕರ್ನಾಟಕ

05.12.2014

# ರಾಜ್ಯದ ರೈತರ ಆದಾಯ ಹೆಚ್ಚಿಸಿದ ಆನ್‌ಲೈನ್ ಮಾರುಕಟ್ಟೆ

■ **ವೈ.ಗ. ಜಗದೀಶ್** ಬೆಂಗಳೂರು

ಕೃಷಿ ಉತ್ಪನ್ನ ಮಾರುಕಟ್ಟೆ(ಎಪಿಎಂಸಿ)ಗಳಲ್ಲಿ ಇ-ಮಾರುಕಟ್ಟೆ ಆರಂಭಿಸಿದ ಬಳಿಕ ದಲ್ಲಾಳಿಗಳ ಪಾಲಾಗುತ್ತಿದ್ದ ಲಾಭ ರೈತರ ಖಾತೆಗೆ ಜಮೆ ಆಗತೊಡಗಿದೆ.

ದೇಶದಲ್ಲಿಯೇ ಮೊದಲ ಬಾರಿಗೆ ರಾಜ್ಯದಲ್ಲಿ 2014ರ ಫೆಬ್ರವರಿಯಲ್ಲಿ ಆಯ್ದ ಎಪಿಎಂಸಿಗಳಲ್ಲಿ ಆನ್‌ಲೈನ್ ವ್ಯಾಪಾರ ಶುರು ಮಾಡಲಾಗಿತ್ತು. ಕಳೆದ 9 ತಿಂಗಳಲ್ಲಿ ಎಪಿಎಂಸಿ ಅಂಗಳದಲ್ಲಿ ಬದಲಾವಣೆಯ ಗಾಳಿ ಬೀಸಿದ್ದು ಕೃಷಿ ಉತ್ಪನ್ನಗಳ ಹರಿವಿನ ಪ್ರಮಾಣ ಹೆಚ್ಚಳವಾಗಿದೆ. ಆನ್‌ಲೈನ್ ವ್ಯಾಪಾರದಲ್ಲಿ ದೂರದ ಯಾವುದೋ ಊರಿನಲ್ಲಿ ಕುಳಿತು ಬಿಡ್ ಮಾಡುವುದರಿಂದಾಗಿ ರಿಂಗ್(2-3 ದಲ್ಲಾಲರು ಮಾತನಾಡಿಕೊಂಡು ದರ ಇಳಿಸುವ ಪದ್ಧತಿ)ವ್ಯವಹಾರಕ್ಕೆ ಕಡಿವಾಣ ಬಿದ್ದಿದೆ.

**ತಪ್ಪಿದ ದಲ್ಲಾಲರ ಹಾವಳಿ**

ಆನ್‌ಲೈನ್ ವ್ಯಾಪಾರ ಶುರು ಮಾಡಿದ ತಿಪಟೂರು, ಚಾಮರಾಜನಗರ, ಗದಗದಲ್ಲಿ ನಡೆಸಿದ ಅಧ್ಯಯನ ಪ್ರಕಾರ 2013ಕ್ಕೆ ಹೋಲಿಸಿದರೆ 2014ರಲ್ಲಿ ಕೃಷಿ ಉತ್ಪನ್ನಗಳ ಆವಕ ಹೆಚ್ಚಿದೆ. ಅದೇ ಹೊತ್ತಿಗೆ ರೈತರು ಬೆಳೆದ ಉತ್ಪನ್ನಗಳಿಗೆ ನಿರೀಕ್ಷಿಸಲಾಗದಷ್ಟು ಬೆಲೆ ಸಿಕ್ಕಿದೆ. ರೈತರ ಖಾತೆಗೆ ಜಮೆಯಾದ ಹಣದ ಪ್ರಮಾಣ ಗಣನೀಯವಾಗಿ ಏರಿಕೆಯಾಗಿದೆ. ಎಪಿಎಂಸಿ ಮೂಲಕ ಸಂಗ್ರಹಿಸುವ ತೆರಿಗೆ ಪ್ರಮಾಣದಲ್ಲೂ ಹೆಚ್ಚಳವಾಗಿದೆ.

ಇಲ್ಲಿಯವರೆಗೆ ರೈತರು ಕೃಷಿ ಉತ್ಪನ್ನ ಮಾರಾಟ ನಂತರ ಬಿಳಿಚೀಟಿ ಹೆಸರಿನಲ್ಲಿ ದಲ್ಲಾಲರು ಲೆಕ್ಕ ತೀರುವಳಿ ಮಾಡುತ್ತಿದ್ದರು. ಇದರಿಂದ ರೈತರು ತೊಂದರೆಗೆ ಒಳಗಾಗುತ್ತಿದ್ದರು. ಆನ್‌ಲೈನ್ ವ್ಯಾಪಾರದಿಂದಾಗಿ ಪಾರದರ್ಶಕ ಪದ್ಧತಿ ಜಾರಿಯಾಗಿದೆ. ಎಪಿಎಂಸಿಯೇ ಖರೀದಿದಾರರಿಗೆ, ದಲ್ಲಾಲರಿಗೆ ಅಧಿಕೃತ ಲೆಕ್ಕ ತೀರುವಳಿ ಪಟ್ಟಿ ನೀಡಿದೆ. ಅಲ್ಲದೇ ರೈತರ ಖಾತೆಗೆ ನೇರವಾಗಿ ಹಣ ಜಮೆ ಮಾಡುವ ಪದ್ಧತಿಯನ್ನೂ ಅನುಷ್ಠಾನಗೊಳಿಸಲಾಗಿದೆ. ಪರಿಣಾಮ ರೈತರ ಬೆವರಿನ ಫಲ ಅವರಿಗೇ ಸಿಗುವಂತಾಗಿದೆ ಎಂದು ಆನ್‌ಲೈನ್ ವ್ಯಾಪಾರ ಪದ್ಧತಿಯ ಉಸ್ತುವಾರಿ ಹೊತ್ತಿರುವ ಸಹಕಾರ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಮನೋಜ್ ರಾಜನ್ ವಿವರಿಸುತ್ತಾರೆ.

**ಅಧ್ಯಯನದ ಸಾರ**

ಗದಗ ಎಪಿಎಂಸಿ ಮಾರುಕಟ್ಟೆಯಲ್ಲಿ 2013ರ ಆಗಸ್ಟ್‌ನಿಂದ ಅಕ್ಟೋಬರ್‌ವರೆಗೆ 1.18 ಲಕ್ಷ ಕ್ವಿಂಟಾಲ್ ಹೆಸರು ಕಾಳು/ಬೆಳೆ ಆವಕವಾಗಿದ್ದು 57.18 ಕೋಟಿ ರೂ. ವಹಿವಾಟು ನಡೆದಿತ್ತು. 2014ರ ಇದೇ ಅವಧಿಯಲ್ಲಿ 1.20 ಲಕ್ಷ ಕ್ವಿಂಟಾಲ್ ಹೆಸರು ಕಾಳು ವ್ಯಾಪಾರವಾಗಿದ್ದು ವಹಿವಾಟು ಪ್ರಮಾಣ 78.97 ಕೋಟಿ ರೂ. ಗೆ ಏರಿಕೆಯಾಗಿದೆ. 21.53 ಕೋಟಿ ರೂ. ಹೆಚ್ಚುವರಿ ಲಾಭ ರೈತರಿಗೆ ಸಿಕ್ಕಿದೆ.

ತಿಪಟೂರು ಎಪಿಎಂಸಿಯಲ್ಲಿ ಒಣ ಕೊಬ್ಬರಿ 2013ರಲ್ಲಿ 505 ಸಾವಿರ ಕ್ವಿಂಟಾಲ್ ಆವಕವಾಗಿ, 251 ಕೋಟಿ ರೂ. ವಹಿವಾಟು ನಡೆದಿತ್ತು. 2014ರ ಅಕ್ಟೋಬರ್‌ವರೆಗೆ 286 ಸಾವಿರ ಕ್ವಿಂಟಾಲ್ ಆವಕವಾಗಿದ್ದು, 401 ಕೋಟಿ ರೂ. ವಹಿವಾಟು ನಡೆದಿದೆ.

ಆನ್‌ಲೈನ್ ವ್ಯಾಪಾರ ಆರಂಭವಾದ ಬಳಿಕ 8000 ರೂ.ಗಳಿಂದ ಗರಿಷ್ಠ 17,500ರೂ. ವರೆಗೆ ರೈತರಿಗೆ ದರ ಸಿಕ್ಕಿದೆ. ಚಾಮರಾಜನಗರದ ಅರಿಶಿನವನ್ನು ತಮಿಳುನಾಡಿನಲ್ಲಿ ಮಾರಾಟ ಮಾಡಲಾಗುತ್ತಿತ್ತು. ಸಾಗಣೆ ವೆಚ್ಚವೂ ರೈತರಿಗೆ ಹೊರೆಯಾಗಿತ್ತು. 2013ರಲ್ಲಿ 20592 ಕ್ವಿಂಟಾಲ್ ಅರಿಶಿನ ಆವಕವಾಗಿದ್ದು, 12.15 ಕೋಟಿ ರೂ ವಹಿವಾಟು ನಡೆದಿತ್ತು. ಆನ್‌ಲೈನ್ ನಂತರ 2014ರಲ್ಲಿ 32382 ಕ್ವಿಂಟಾಲ್ ಆವಕವಾಗಿದ್ದು 20.06 ಕೋಟಿ ರೂ. ವಹಿವಾಟು ನಡೆದಿದೆ.